ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷಿಣಿಯವರೆ, ಪೆಟ್ರೋಲ್.....

ಉಪಾಧ್ಯಕ್ಷಿಣಿಯವರು.—ನಿಯಮ ೩೩ಳಿರ ಪ್ರಕಾರ ಚರ್ಚೆಗೆ ಅವಕಾಶವೇ ಇಲ್ಲ. ತಾವು ಈಗ ಕುಳಿತುಕೊಳ್ಳಿ. ಮೊದಲಂ ಮಾನ್ಯ ಶಿವನಂಜಪ್ಪನವರು ಓದಲಿ.

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಉಪಾಧ್ಯಕ್ಷಿಣಿಯವರೆ, ಮಂಜಾನೆ ೭ ಗಂಟೆಯಿಂದ ಸಂಜೆ ೭ ಗಂಟೆಯವರೆಗೆ ಪೆಟ್ರೋಲ್ ಮಾರಾಟ ಮಾಡುವುದು ಸರ್ಕಾರದ ನೀತಿಯಾಗಿದ್ದು ಇದರಿಂದ ಸಾರ್ವಜನಿಕರಿಗೆ ಹೇಳತೀರದಷ್ಟು ತೊಂದರೆಯಾಗಿದೆ. ಹಾಗೂ ಭಾನುವಾರದಂದು ಮಾರಾಟವನ್ನು ನಿಲ್ಲಿಸಿರುವುದನ್ನು ಗಮನಿಸಿದಲ್ಲಿ ಸರ್ವೆ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ ಸಾವಿರಾರು ಜನರು ಕ್ಯೂನಲ್ಲಿ ನಿಂತು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಆಜ್ಞೆಯನ್ನು ಹಿಂತೆಗೆದುಕೊಳ್ಳಲು ಕರ್ನಾಟಕ ಸರ್ಕಾರದಿಂದ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ನಾನು ಮಾನ್ಯ ನಾಗರೀಕ ಸರಬರಾಜು ಖಾತೆಯ ಮಂತ್ರಿಗಳಿಂದ ಒಂದು ಹೇಳಿಕೆಯನ್ನು ಬಯಸುತ್ತೇನೆ

SRI AZEEZ SAIT —Just today it has been transferred to me I will come before this House within two days. I just want two days time

ಶ್ರೀ ವಾಟಾಳ್ ನಾಗರಾಜ್,—ಮಾನ್ಯ ಉಪಾಧ್ಯಕ್ಷಿಣಿಯವರೆ, ಇದು ಬಹಳ ಗಂಭೀರವಾದ ಪ್ರಶ್ನೆ.....

ಉಪಾಧ್ಯಕ್ಷಿಣಿಯವರು,—ನೀವು ಬೇರೆ ನೋಟೀಸನ್ನು ಕಳುಹಿಸಿಕೊಡಿ. ನಿಯಮ ೩೩ಳಿರಲ್ಲಿ ಚರ್ಚೆಗೆ ಅವಕಾಶವಿಲ್ಲ

(ಗೊಂದಲ)

ಉಪಾಧ್ಯಕ್ಷಿಣಿಯವರು.—ವಾಟಾಳ್ ನಾಗರಾಜ್‌ರವರೇ, ನೀವು ಹಿರಿಯ ಸದಸ್ಯರು. ನಿಮಗೆ ಎಲ್ಲಾ ವಿಚಾರಗಳೂ ಗೊತ್ತಿದೆ. ನಿಯಮ ೩೩ಳಿರಲ್ಲಿ ಚರ್ಚೆಗೆ ಅವಕಾಶವಿಲ್ಲ. ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡಲು ೨ ದಿವಸ ಟೈಂನ್ನು ಕೇಳಿದ್ದಾರೆ.

ಉಪಾಧ್ಯಕ್ಷಿಣಿಯವರು.—ನೀವು ಇಬ್ಬರೂ ನಿಂತುಕೊಂಡು ಒಟ್ಟಿಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಿಯಮ ೩೩ಳಿ ಮೇರೆಗೆ ಕೇಳಿದ ಪ್ರಶ್ನೆಗೆ ಉತ್ತರಿಸುವುದಕ್ಕೆ ರಾಜ್ಯ ಸರ್ಕಾರದವರು ಎರಡು ದಿನ ಟೈಂ ಕೇಳುತ್ತಿದ್ದಾರೆ. ಆದರೆ ಇದು ರಾಜ್ಯ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅರ್ಹರಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು ಅದಕ್ಕಾಗಿ ಒಂದು ನಿರ್ಣಯವನ್ನು ಮಾಡಬೇಕಾಗುತ್ತದೆ.

(ಗೊಂದಲ)

ಅಕ್ರಮವಾಗಿ ಕಾಳಸಂತೆಯಲ್ಲಿ ಮಾರುತ್ತಿದ್ದಾರೆ. ಜನತೆಗೆ ಇದರಿಂದ ತೊಂದರೆ ಆಗಿದೆ ಎಂದು ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಬರೆಯಬೇಕಾಗಿದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು.—ಇದು ಯಾವುದೂ ರೆಕಾರ್ಡ್‌ನಲ್ಲಿ ಹೋಗುವುದಿಲ್ಲ. ಇದರ ಮೇಲೆ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ತಾವು ಬೇರೆ ನೋಟೀಸ್ ಕೊಡಿ.

(ಗೊಂದಲ)

ಉಪಾಧ್ಯಕ್ಷಿಣಿಯವರು.—ಯಾರನ್ನು ನಾನು ಕರೆಯುತ್ತೇನೆ ಅವರು ಹೇಳಿದ್ದನ್ನು ಮಾತ್ರ ರೆಕಾರ್ಡಿಗೆ ಹೋಗಬೇಕು. ಆದು ಬಿಟ್ಟು ಬೇರೇನು ರೆಕಾರ್ಡಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಈಗತಾನೇ ನೋಟೀಸ್ ಕಳುಹಿಸಿ ಈಗಲೇ ಮಂತ್ರಿಗಳು ಉತ್ತರ ಕೊಡಲಿ, ಚರ್ಚೆಗೆ ಅವಕಾಶ ಮಾಡಿಕೊಡಿ ಎಂದರೆ ಅದು ಸಾಧ್ಯವಿಲ್ಲ. ಎರಡು ದಿನ ಕಳೆದು ಹೇಳುತ್ತೇನೆಂದು ಹೇಳಿದ್ದಾರೆ, ದಯವಿಟ್ಟು ಈ ರೀತಿ ಮಾತನಾಡುವುದು ಸರಿಯಲ್ಲ, ರೂಲ್ ೩೩ಳಿರ ಪ್ರಕಾರ ಚರ್ಚೆಗೆ ಅವಕಾಶ ಇಲ್ಲ.

ಒಬ್ಬರು ಮಾನ್ಯ ಸದಸ್ಯರು.—ಸದಸ್ಯರು ಮಾತನಾಡತಕ್ಕ ಸ್ಥಳದಲ್ಲಿ ವಾಟಾಳ್ ನಾಗರಾಜ್ ಮತ್ತು ಶಿವರಾಮೇಗೌಡರಲ್ಲಿ ಪ್ರಾರ್ಥಿಸುತ್ತೇನೆ. ಒಬ್ಬೊಬ್ಬರೇ ನಿಂತುಕೊಂಡು ಮಾತನಾಡಲಿ. ಇಬ್ಬರೂ ಒಟ್ಟಿಗೇ ನಿಂತು ಮಾತನಾಡಿದರೆ ಏನು ವಿಚಾರ ಹೇಳುತ್ತಾರೆಂಬುದು ನಮಗೆ ಗೊತ್ತಾಗುವುದಿಲ್ಲ